ಮಿತ್ರರೇ,

ಪರಿಸರ ರಕ್ಷಣೆ ಇವತ್ತಿನ ನಮ್ಮ ತುರ್ತು ಅಗತ್ಯವಾಗಿದೆ. ಇದರಲ್ಲಿ ಮುಖ್ಯಭಾಗ ಅರಣ್ಯ ರಕ್ಷಣೆ. ಈ ಬಗ್ಗೆ ನಾವೆಲ್ಲರೂ ಸಂಘಟಿತರಾಗಿ ಸಾಮೂಹಿಕ ಪ್ರಯತ್ನ ನಡೆಸಬೇಕಾದ್ದು ಅಗತ್ಯ. ಇಂಥ ಪ್ರಯತ್ನಗಳು ಈಗಾಗಲೇ ಕೆಲವು ಭಾಗಗಳಲ್ಲಿ ನಡೆದಿವೆ. ಈಗ ಸದ್ಯಕ್ಕೆ ಸಾಗರ, ಹೊಸನಗರ, ಸೊರಬ, ತೀರ್ಥಹಳ್ಳಿ

—ಈ ಕೆಲವು ತಾಲ್ಲೂಕುಗಳ ಆಸಕ್ತರು ಕೂಡಿ ಈ ಸಂಘಟನೆ ಮತ್ತು ಅನಂತರದ ಕಾರ್ಯಕ್ರಮಗಳ ಬಗ್ಗೆ ಒಂದು ಪ್ರಾರಂಭಿಕ ಸಮಾಲೋಚನೆ ನಡೆಸಲು ಆಸಕ್ತರ ಸಾರ್ವಜನಿಕ ಸಭೆಯೊಂದನ್ನು **ತಾ. 18-12-83** ರಂದು **ಭಾನುವಾರ ಬೆಳಿಗ್ಗೆ 10** ಗಂಟೆಗೆ ಸರಿಯಾಗಿ **ಶಿವರಾಮಕಾರಂತ ರಂಗಮಂದಿರ, ಹೆಗ್ಗೋಡು** (ಸಾಗರ ತಾ.) ನಲ್ಲಿ ಕರೆಯುವುದೆಂದು ಕೆಲವು ಮಿತ್ರರು ಯೋಚಿಸಿದ್ದೇವೆ. ಈ ಸಭೆಗೆ ತಾವು ತಪ್ಪದೆ ಸಕಾಲಕ್ಕೆ ದಯಮಾಡಿಸಿ ಮುಂದಿನ ಸಂಘಟನೆ-ಕಾರ್ಯಕ್ರಮಗಳ ಬಗ್ಗೆ ತಮ್ಮ ಸೂಚನೆ ಕೊಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಡಾ. ಶಿವರಾಮಕಾರಂತರು ಸಭೆಯಲ್ಲಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡುತ್ತಾರೆ.

ಕೆ. ವಿ. ಸುಬ್ಬಣ್ಣ
ನೀನಾಸಮ್, ಹೆಗ್ಗೋಡು (ಸಾಗರ-ಶಿವಮೊಗ್ಗ)